ಅಸಲು ದಾವಾ ಸಂಖ್ಯೆ: 980/2018

**ಪಿ.ಡಬ್ಲ್ಯೂ-1**

**ದಿಃ 02–02–2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ AAP ವಕೀಲರಿಂದ**

ನಿಪಿಃ15 ರಿಂದ 20 ಭಾವಚಿತ್ರಗಳು ದಾವಾ ಸ್ವತ್ತಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಭಾವಚಿತ್ರಗಳಲ್ಲಿ ಅಂಗಡಿಯ ನಂಬರ ಹಾಗೂ ಸಿಟಿಎಸ್ ನಂಬರ ಇರುವುದಿಲ್ಲ ಎಂದರೆ ಸಾಕ್ಷಿಯು ಅಂಗಡಿಯನ್ನು ಪೇಂಟ್ ಮಾಡಿದ ಕಾರಣ ಅದು ಕಾಣುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ಎಲ್ಲಿ ಯಾರು ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ನಾನು ನನ್ನ ಮೊಬೈಲ್ ನಲ್ಲಿ ತೆಗೆದಿದ್ದು, ಅದನ್ನು ತುಶಾರ್ ಪೋಟೋ ಸ್ಟುಡಿಯೋ ದಲ್ಲಿ ಪ್ರಿಂಟ್ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಾಗ ನಾನು ಅವುಗಳ ರಶೀದಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಭಾವಚಿತ್ರಗಳನ್ನು ನಾನು ನನ್ನ ಮೊಬೈಲ್ ನಲ್ಲಿ ತೆಗೆದಿರುವುದಿಲ್ಲ, ಅವುಗಳನ್ನು ನಾನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿಃ16, 18, 19, 20 ಭಾವಚಿತ್ರಗಳಲ್ಲಿ ಕಾಣಿಸಿರುವ ಶೆಟರ್ ಗಳು, ಹಗಲಿನ ಹೊತ್ತು ಕೆಲಸದ ಸಮಯದಲ್ಲಿ ಅಷ್ಟೇ ತೆರೆದಿರುತ್ತೇವೆ, ಅದನ್ನು ಹೊರತು ಪಡಿಸಿ ಬೇರೆ ಸಮಯದಲ್ಲಿ ಬಂದ್ ಇರುತ್ತವೆ ಎಂದರೆ ಸಾಕ್ಷಿಯು ಕೆಲಸದ ನಂತರ ರಾತ್ರಿ ಸಮಯದಲ್ಲಿ ಶೆಟರ್ ಗಳು ಬಂದ್ ಇರುತ್ತವೆ ಎಂದು ನುಡಿಯುತ್ತಾರೆ. ನಿಪಿಃ18, 19, 20 ಭಾವಚಿತ್ರಗಳಲ್ಲಿ ಕಾಣುವ ವ್ಯಕ್ತಿ ಯಾರು ಎಂದರೆ ಸಾಕ್ಷಿಯು ಕಾರ್ಖಾನೆಯ ಕಾರ್ಮಿಕ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಯು ದಾವಾ ಸ್ವತ್ತಿನ ಬಾಗಿಲನ್ನು ಕೀ ಮೂಲಕ ತೆರೆಯಲಾಗದ ಸಮಯದಲ್ಲಿ, ಬಾಗಿಲಿನ ಕೀಲನ್ನು ಮುರಿದು ತೆಗೆಯಲು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಕೀ ಪ್ರತಿವಾದಿಯ ಬಳಿ ಇತ್ತು. ಸದರಿ ಪ್ರತಿವಾದಿಗೆ ನಾನು ಬಾಗಿಲನ್ನು ಮುರಿದು ತೆರೆಯಲು ನೋಟೀಸನ್ನು ನೀಡಿರುತ್ತೇನೆಯೇ

ಎಂದರೆ ಸಾಕ್ಷಿಯು ದಿಃ07.06.2024 ರಂದು ಪ್ರತಿವಾದಿಯು ನನ್ನ ಮನೆಗೆ ಬಂದು ನನಗೆ ಬಾಡಿಗೆಯನ್ನು ಕಟ್ಟಲಾಗುವುದಿಲ್ಲ ಎಂದು ಸದರಿ ಕೀಗಳನ್ನು ನನ್ನ ಮನೆಯಲ್ಲಿ ಎಸೆದುಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಘಟನೆಯ ನಂತರ ನಾನು ಪ್ರತಿವಾದಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಪ್ರತಿವಾದಿಯು ನನ್ನ ಮನೆಗೆ ಬಂದು ದಾವಾ ಸ್ವತ್ತಿನ ಬಾಗಿಲಿನ ಕೀಗಳನ್ನು ಎಸೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಸ್ವತ್ತನ್ನು ಸುಮಾರು ಮೊದಲು ಖಾಲಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ದಿಃ07.06.2024 ರಂದು ಸ್ವತ್ತಿನ ಕೀಗಳನ್ನು ಆ ರೀತಿಯಾಗಿ ಕೊಟ್ಟು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಕೀಗಳನ್ನು ಎಸೆದಿರುವ ಬಗ್ಗೆ ಅಥವಾ ಶೆಟರ್ ಗಳನ್ನು ಮುರಿದಿರುವ ಬಗ್ಗೆ ನಾನು ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಘಟನೆಯು ದಿಃ07.06.2024 ರಂದು ನಡೆದಿರುತ್ತದೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಸುಮಾರು ಮೊದಲು ಪಡೆದಿದ್ದರಿಂದ ನಾನು ಸದರಿ ವಿಷಯಗಳ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಪ್ರತಿವಾದಿಯು ಜೂನ್ 2024 ರಲ್ಲಿ ಕೀಗಳನ್ನು ಕೊಟ್ಟ ನಂತರ ನಾನು ಸದರಿ ಸ್ವತ್ತಿನ ಸ್ವಾಧೀನವನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಶೆಟರ್ ನ್ನು ಮುರಿದು ತೆರೆದ ನಂತರ ಯಾವುದೇ ಹೆಚ್ಚಿನ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಭಾವಚಿತ್ರಗಳೇ ಸದರಿ ವಿಷಯದ ಬಗ್ಗೆ ಸಾಕ್ಷಿ ಆಗಿರುತ್ತದೆ ಎಂದು ನುಡಿಯುತ್ತಾರೆ.

2. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿದ್ದು, ಪ್ರತಿವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದ ನಂತರ ಪವಾರ್ ಜನರಲ್ ಸ್ಟೋರ್ ರವರಿಗೆ ಸದರಿ ಸ್ವತ್ತನ್ನು ಬಾಡಿಗೆಗೆ ಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸದರಿ ಭಾವಚಿತ್ರದಲ್ಲಿರುವ ಪವಾರ್ ಜನರಲ್

ಸ್ಟೋರನ್ನು ನೋಡಿ ಗುರುತಿಸಿದ ಕಾರಣ, ಅದನ್ನು ನಿಡಿಃ2 ಎಂದು ಗುರುತಿಸಲಾಯಿತು. ಪ್ರತಿವಾದಿಯಿಂದ ಹೆಚ್ಚಿನ ಬಾಡಿಗೆಯನ್ನು ಪಡೆಯುವ ಉದ್ದೇಶದಿಂದ ನಾನು ದಿಃ07.06.2024 ರಂದು ಸ್ವತ್ತಿನ ಸ್ವಾಧೀನವನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ನಿಪಿಃ15 ರಿಂದ ನಿಪಿಃ20 ಭಾವಚಿತ್ರಗಳನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ದಿಃ24.03.2025 ರಂದು ಬಾಕಿ ಬಾಡಿಗೆಗೆ ಸಂಬಂಧಿಸಿ ಹಾಜರು ಪಡಿಸಿದ ಮೆಮೋ ಆಫ್ ಕ್ಯಾಲ್ಕುಲೇಷನ್ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ನಾನು ಹೇಳಿದಂತೆ ಯಾವುದೇ ಬಾಡಿಗೆ ಹಣವನ್ನು ನೀಡಲು ಬಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**